RNU AIR DHARWAD

NOVEMBER 10, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಮುಂಬರುವ 5 ವರ್ಷಗಳಲ್ಲಿ,** ದೇಶಾದ್ಯಂತ, ವೈದ್ಯಕೀಯ ಕೋರ್ಸ್‌ನ, ಒಟ್ಟು, 10 ಸಾವಿರದ 23 ಹೊಸ ಸೀಟುಗಳು ಲಭ್ಯವಾಗಲಿವೆ; ಕೇಂದ್ರ ಸರ್ಕಾರ, 15 ಸಾವಿರ ಕೋಟಿ ರೂಪಾಯಿ, ವಿನಿಯೋಗಿಸಿದೆ ಎಂದು, ಕೇಂದ್ರ ಆರೋಗ್ಯ ಸಮಿತಿ ಸದಸ್ಯೆ ಹಾಗೂ, ದಾವಣಗೆರೆ ಸಂಸದರಾದ, ಪ್ರಭಾ ಮಲ್ಲಿಕಾರ್ಜುನ ತಿಳಿಸಿದ್ದಾರೆ. ದಾವಣಗೆರೆಯ, ಜೆ.ಜೆ.ಎಂ. ವೈದ್ಯಕೀಯ ಮಹಾವಿದ್ಯಾಲಯದ, ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ, ಪದವಿ ಪ್ರದಾನ ಸಮಾರಂಭದಲ್ಲಿ, ಅವರು ಮಾತನಾಡಿದರು. ಹೆಚ್ಚಳವಾಗಲಿರುವ ವೈದ್ಯಕೀಯ ಸೀಟುಗಳಲ್ಲಿ, 5 ಸಾವಿರದ 23 ಎಂ.ಬಿ.ಬಿ.ಎಸ್. ಪದವಿ ಹಾಗೂ 5 ಸಾವಿರ, ಸ್ನಾತಕೋತ್ತರ ಎಂ.ಡಿ. ಸೀಟುಗಳಿದ್ದು, ಟೆಲಿಮೆಡಿಸಿನ್ ಹಾಗೂ ಕೃತಕ ಬುದ್ಧಿಮತ್ತೆ ಆಧಾರಿತ, ವೈದ್ಯಕೀಯ ಸೇವೆ, ಭವಿಷ್ಯದ ಆದ್ಯತೆ ಎಂದರು.

<><><>

**ವಿಜಯನಗರ ಜಿಲ್ಲೆ, ಕೂಡ್ಲಿಗಿ ತಾಲೂಕಿನ,** 74 ಕೆರೆಗಳಿಗೆ ನೀರು ತುಂಬಿಸುವ, 870 ಕೋಟಿ ರೂಪಾಯಿ ವೆಚ್ಚದ ಯೋಜನೆಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು. ಬರಡು ನೆಲ ಕೂಡ್ಲಿಗಿ ತಾಲೂಕನ್ನು, ಹಸುರಾಗಿಸಲು ಪಣತೊಟ್ಟ, ಶಾಸಕ ಎನ್.ಟಿ. ಶ್ರೀನಿವಾಸ ಅವರಿಂದ, ಕ್ಷೇತ್ರದ ಅಭಿವೃದ್ಧಿ ವೇಗ ಪಡೆದಿದೆ. 1 ಲಕ್ಷದ 70 ಸಾವಿರ ಜನರಿಗೆ, ಕುಡಿಯುವ ನೀರು ಒದಗಿಸುವ ಜೊತೆಗೆ, ಕೂಡ್ಲಿಗಿಯ ಅಂತರ್ಜಲ ವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ ಎಂದು, ಮುಖ್ಯಮಂತ್ರಿ ಶ್ಲಾಘಿಸಿದರು. ಹಲವು ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ, ವಿವಿಧ ಯೋಜನೆಗಳ ಫಲಾನುಭವಿಗಳಿಗೆ, ಅವರು ಸವಲತ್ತು ವಿತರಿಸಿದರು.

<><><>

**ಬೆಳಗಾವಿಯ ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್,** ನಾಡಿನ ಹಿರಿಯ ಸಾಹಿತಿಗಳು ಮತ್ತು ಯುವ ಸಾಹಿತಿಗಳಿಗೆ ನೀಡುವ, ಕಳೆದ ಮೂರು ವರ್ಷಗಳ, ರಾಜ್ಯ ಮಟ್ಟದ ಸಾಹಿತ್ಯಿಕ ಪ್ರಶಸ್ತಿಗಳನ್ನು ಪ್ರಕಟಿಸಿದೆ. ಕವಿ ಎಚ್.ಎಸ್. ಶಿವಪ್ರಕಾಶ ಅವರಿಗೆ, 2023ನೇ ಸಾಲಿನ ಕಾವ್ಯ ಪ್ರಶಸ್ತಿ, 2024ರ ವೈಚಾರಿಕ ಮತ್ತು ಪತ್ರಿಕೋದ್ಯಮ ಪ್ರಶಸ್ತಿಗೆ, ಹಿರಿಯ ಪತ್ರಕರ್ತ ಜಿ.ರಾಮಕೃಷ್ಣ ಭಾಜನರಾಗಿದ್ದಾರೆ. 2025ನೇ ಸಾಲಿನ, ಕಥಾ ಸಾಹಿತ್ಯ ಪ್ರಶಸ್ತಿ, ಲೇಖಕಿ ಬಿ.ಟಿ. ಜಾಹ್ನವಿ ಅವರಿಗೆ ಸಂದಿದೆ ಎಂದು, ಟ್ರಸ್ಟ್ ಅಧ್ಯಕ್ಷೆ ವಿನಿಯಾ ಒಕ್ಕುಂದ ತಿಳಿಸಿದ್ದಾರೆ.

<><><>

**ಮೈಸೂರಿನ, ಲೇಖಿಕಾ ಸಾಹಿತ್ಯ ವೇದಿಕೆಯು** ತನ್ನ 25 ನೇ ರಜತ ಮಹೋತ್ಸವ ಸಂಭ್ರಮದ ಅಂಗವಾಗಿ, 25 ಜನ ಲೇಖಕರಿಗೆ 'ಲೇಖಿಕಾ ಸಾಹಿತ್ಯ ಶ್ರೀ' ಪ್ರಶಸ್ತಿ ಪ್ರದಾನಿಸಿ ಗೌರವಿಸಿದೆ. ಹಾಸನದ ಎ.ವಿ.ಕೆ ಕಾಲೇಜು ಸಭಾಂಗಣದಲ್ಲಿ ಪ್ರಶಸ್ತಿ ಸ್ವೀಕರಿಸಿದ, ಧಾರವಾಡದ ದಮಯಂತಿ ನರೇಗಲ್ ಅವರು, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

**ಭಾರತದ, ಕಂಪ್ಯೂಟರ್ ಸೈನ್ಸ್ ಶಿಕ್ಷಣ** ಕ್ಷೇತ್ರದ ಪಿತಾಮಹ ಎಂದೇ ಖ್ಯಾತರಾಗಿದ್ದ ವೈದ್ಯೇಶ್ವರನ್ ರಾಜಾರಾಮನ್ ಅವರ ನಿಧನಕ್ಕೆ ಬೆಂಗಳೂರಿನ, ಭಾರತೀಯ ವಿಜ್ಞಾನ ಸಂಸ್ಥೆ–ಐ.ಐ.ಎಸ್.ಸಿ, ತನ್ನ ಸಂಸ್ಥೆಯ ಎಕ್ಸ್ ಖಾತೆ ಮೂಲಕ ಭಾವ ಪೂರ್ಣ ಶ್ರದ್ಧಾಂಜಲಿ ಸೂಚಿಸಿದೆ. 1982 ರಿಂದ 1994 ರ ವರೆಗೆ, ರಾಜಾರಾಮನ್ ಅವರು ಐ.ಐ.ಎಸ್.ಸಿ ಯಲ್ಲಿ ಸೇವೆ ಸಲ್ಲಿಸಿದ್ದು, ದೇಶದ ಸೂಪರ್ ಕಂಪ್ಯೂಟಿಂಗ್ ಹಾಗೂ ಸಮಾನಾಂತರ ಕಂಪ್ಯೂಟಿಂಗ್ ಸಾಮರ್ಥ್ಯವನ್ನು ಹೆಚ್ಚಿಸಿದ್ದರು ಎಂದು ಬಣ್ಣಿಸಿದೆ.

<><><>

**ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಕಾನೂನು ಬದ್ಧ ಸಂಸ್ಥೆಯಾಗಿದೆ.** ದೇಶಭಕ್ತಿ, ಪ್ರಾಮಾಣಿಕತೆ, ಅನುಶಾಸನ, ಉತ್ಕೃಷ್ಟತೆ ಹಾಗೂ ಸಾಮೂಹಿಕತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೌಲ್ಯಗಳಾಗಿವೆ. ಸಾರ್ವಜನಿಕರು ದೇಶದ ಒಳಿತಿನ ನಿಟ್ಟಿನಲ್ಲಿ ಈ ಮೌಲ್ಯಗಳನ್ನು ತಮ್ಮ ಕೆಲಸಗಳಲ್ಲಿ ಅಳವಡಿಸಿಕೊಳ್ಳಬೇಕು ಎಂದು ಆರೆಸ್ಸೆಸ್ ಸರ ಸಂಘಚಾಲಕ ಮೋಹನ್ ಭಾಗವತ್ ಹೇಳಿದರು. ಬೆಂಗಳೂರಿನಲ್ಲಿ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಯೋಗಿ ಅರವಿಂದರು, ಸುಭಾಷ್ ಚಂದ್ರ ಬೋಸರು ವಿದೇಶದಲ್ಲಿ ಕೆಲಸ ಮಾಡುವ ಅವಕಾಶವಿದ್ದರೂ ತ್ಯಜಿಸಿ ದೇಶಸೇವೆಯಲ್ಲಿ ತೊಡಗಿದರು. ಇಂತಹ ಇಚ್ಛೆಯನ್ನು ಯುವಕರಲ್ಲಿ ಉತ್ತೇಜಿಸಬೇಕಿದೆ ಎಂದರು.

<><><>

**ಕೇಂದ್ರ ರಸ್ತೆ ಮೂಲಸೌಕರ್ಯ ನಿಧಿ ಅಡಿ,** 6 ಕೋಟಿ ರೂಪಾಯಿ ವೆಚ್ಚದಲ್ಲಿ, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ಮಿಶ್ರಿಕೋಟಿಯಿಂದ, ಗಂಜಿಗಟ್ಟಿ ಗ್ರಾಮದ ವರೆಗೆ, ಮೂರೂವರೆ ಕಿಲೋ ಮೀಟರ್ ರಸ್ತೆ ನಿರ್ಮಾಣ ಕಾಮಗಾರಿಗೆ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಚಾಲನೆ ನೀಡಿದ್ದಾರೆ.

<><><>

**ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ** ಘಟಕವನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ–ಕೆಪಿಟಿಸಿಎಲ್ ಸಹಯೋಗದೊಂದಿಗೆ, ಬೆಂಗಳೂರಿನ ಬಿಡದಿಯಲ್ಲಿ ಸ್ಥಾಪಿಸಲಾಗಿದ್ದು, ಪ್ರತಿನಿತ್ಯ ತ್ಯಾಜ್ಯದಿಂದ 11 ದಶಾಂಶ 5 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>